ದಕ್ಷಿಣ ಆಫ್ರಿಕಾದಲ್ಲಿ ಬಾಪೂ ಜೊತಗೆ ಹರಿಲಾಲ ಹಲವು ದಿನಗಳನ್ನು ಕಳೆಯುತ್ತಾ ಬಾಪೂ ಅವರ ಪ್ರತಿಯೊಂದು ಚಟುವಟಿಕೆಗಳನ್ನು ಗಮನಿಸುತ್ತಾರೆ. ದಕ್ಷಿಣ ಆಫ್ರಿಕಾವನ್ನು ಬಿಟ್ಟು ಭಾರತಕ್ಕೆ ಮರಳಲು ಹಡಗನ್ನು ಹಿಡಿಯಬೇಕಿತ್ತು. ಇದಕ್ಕೂ ಮುನ್ನ ಬಾಪೂಗೆ ರಸ್ತುಮ್ ಚಾಚಾ, ಅಬ್ದುಲ್ಲಾ ದಾದಾ ಮುಂತಾದವರು ಬೀಳ್ಕೊಡುಗೆ ಕಾರ್ಯಕ್ರಮ ಏರ್ಪಡಿಸುತ್ತಾರೆ. ಹೊರಡುವ ಮುನ್ನ ಬೆಲೆಬಾಳುವ ಉಡುಗೊರೆಗಳನ್ನು ಬಾಪೂ ಪ್ರತ್ಯೇಕವಾಗಿ ಇಡಿಸುತ್ತಾರೆ. ಇವುಗಳಲ್ಲಿ ಬೆಳ್ಳಿಚೈನಿನ ಸುಂದರ ಗಡಿಯಾರವೂ ಇರುತ್ತದೆ.



ಭಾರತಕ್ಕೆ ಬಂದ ಮೇಲೆ ಬಾಪೂ ಹರಿಲಾಲನಿಗೆ ಪತ್ರ ಬರೆದು ಮುಂಬಯಿಯಲ್ಲಿ ವಿದ್ಯಾಭ್ಯಾಸ ಮುಂದುವರೆಸು ಎನ್ನುತ್ತಾರೆ. ಇತ್ತಕಡೆ ಗುಲಾಬಳನ್ನು ನೋಡಬೇಕು ಎನ್ನುವ ಹಂಬಲ ಹರಿಲಾಲನಿಗಾಗುತ್ತದೆ. ಹರಿಲಾಲ ಡರಬನ್ ರೇವುಪಟ್ಟಣಕ್ಕೆ ಬರುತ್ತಾರೆ. ಅಲ್ಲಿ ಬಾಪೂ, ಮಣಿಲಾಲ, ರಾಮದಾಸ, ದೇವದಾಸ ಎಲ್ಲರೂ ಇರುತ್ತಾರೆ.

ತಿಳಿಯಿತು.

ಆಶ್ರಮದ ಖರ್ಚಿನ ಲೆಕ್ಕ ಮಾಡುವಾಗ ಆಶ್ರಮವಾಸಿಯೊಬ್ಬ ಈ ವಿಷಯವನ್ನು ಬಾಪೂ ಅವರ ಕಿವಿಗೆ ಹಾಕಿದ, 'ದೇವದಾಸನ ಊಟಕ್ಕೆ ಸಕ್ಕರೆಯನ್ನು ಹಾಕಲಾಗುತ್ತದೆ, ಮಿಸೆಸ್ ಗಾಂಧಿಯವರಿಂದಾಗಿ ಸಕ್ಕರೆ ಖರ್ಚು ಹೆಚ್ಚಿದೆ' ಬಾಪೂ ಅವರ ಮುಖದಲ್ಲಿ ಖಿನ್ನತೆ ಮೂಡಿತು.

ಅಂದು ಸಂಜೆ ಎಲ್ಲಾ ಆಶ್ರಮವಾಸಿಗಳು ಪ್ರಾರ್ಥನೆ ಮಾಡಲು ಕಲಿತಿದ್ದರು, ಆಗ ಬಾಪೂ ಅವರು ಬಾ ಅವರ ಅಪರಾಧದ ಬಗ್ಗೆ ಹೇಳಿದರು 'ಆಶ್ರಮದ ಹಣ ದೇಶದ ಹಣವಾಗಿದೆ. ಇದರ ಒಂದೊಂದು ನಯಾಪೈಸೆಯನ್ನು ಸಹ ಸಾರ್ವಜನಿಕ ಹಿತಕ್ಕಾಗಿಯೇ ವ್ಯಯಿಸಬೇಕು. ಒಂದು ವೇಳೆ ನಾವು ನಮ್ಮ ಲಾಭಕ್ಕಾಗಿ, ಮೋಹಕ್ಕಾಗಿ ಅಥವಾ ಸ್ವಾದಕ್ಕಾಗಿ ಈ ಸಾರ್ವಜನಿಕ ಹಣವನ್ನು ಖರ್ಚು ಮಾಡಿದರೆ, ಸೇವೆ ಮಾಡುವ ಅಧಿಕಾರವೇ ನಮಗಿಲ್ಲ. ಇಂದು ಬಾ, ತಮ್ಮ ಮಗನಿಗಾಗಿ ನಿಯಮವನ್ನು ಮೀರಿ ಸಕ್ಕರೆಯನ್ನು ಖರ್ಚು ಮಾಡಿದರೆ ನಮಗೆ ಸೇವೆಯನ್ನು ಮಾಡುವ ಯಾವುದೇ ಅಧಿಕಾರವಿಲ್ಲ. ಬಾ ತಮ್ಮ ಮಗನಿಗಾಗಿ ನಿಯಮವನ್ನು ಮೀರಿ ಸಕ್ಕರೆಯನ್ನು ಖರ್ಚು ಮಾಡಿದ್ದಾರೆ...ನಾಳೆ ಈ ಖರ್ಚು ಹೆಚ್ಚುವುದು...'

ಬಾ ಅವರ ಕಣ್ಣುಗಳಲ್ಲಿ ಕಣ್ಣೀರು ಉಕ್ಕಿತು. ಪ್ರಾರ್ಥನಾಸಭೆಯಲ್ಲಿ ತಾವು ಕೂರುವುದು ಕಷ್ಟವಾಯಿತು ಎಂದು ಅವರು ತಮ್ಮ ಮುಖವನ್ನು ಮುಚ್ಚಿಕೊಂಡರು. ಹರಿಲಾಲನೂ ಸಹ ಅಲ್ಲಿಯೇ ಕೂತಿದ್ದ. ಅವನು ಮಿಸೆಸ್ ಗಾಂಧಿಯವರು ಸಕ್ಕರೆಯನ್ನು ಹೆಚ್ಚು ಖರ್ಚು ಮಾಡುತ್ತಿದ್ದಾರೆ ಎಂದು ದೂರು ಸಲ್ಲಿಸಿದ ಆಶ್ರಮವಾಸಿಯವರನ್ನು ನೋಡುತ್ತಿದ್ದ. ನಂತರ ಅಲ್ಲಿಂದೆದ್ದು ಒಳಗೆ ಹೊರಟು ಹೋದ.

***

ಆದರೆ ಮುದ್ರಣಯಂತ್ರದ ಕೆಲಸಗಳಲ್ಲಿ ಹರಿಲಾಲನ ಮನಸ್ಸು ಕಲೆತಿತ್ತು. 'ಇಂಡಿಯನ್ ಒಪೀನಿಯನ್' ಮುದ್ರಣಗೊಂಡ ದಿನಗಳಲ್ಲಿ ಅವನು ತಡ ರಾತ್ರಿಯವರೆಗೆ ಪ್ರೆಸ್‌ನಲ್ಲಿಯೇ ಉಳಿಯುತ್ತಿದ್ದ. ಪತ್ರಿಕೆಗಳನ್ನು ಕಟ್ಟುವುದು, ಅವುಗಳನ್ನು ಸಿದ್ಧಪಡಿಸುವ ಕೆಲಸಗಳಲ್ಲಿ ದಣಿಯದೆ ತೊಡಗಿಸಿಕೊಳ್ಳುತ್ತಿದ್ದ. ಅಂಕಗಳನ್ನು ಸಿದ್ಧ ಪಡಿಸಿ ಅವುಗಳ ಪಾರ್ಸಲ್ ಮಾಡಿದಾಗ ಹರಿಲಾಲನಿಗೆ ರೋಮಾಂಚನದ ಅನುಭವವಾಗುತ್ತಿತ್ತು.

ಕೆಲವು ದಿನಗಳು ಎಲ್ಲವೂ ಹೊಸದಾಗಿ ಕಂಡಿದ್ದವು, ಹೀಗಾಗಿ ಎಲ್ಲವೂ ಸರಿಯಾಗಿಯೇ ನಡೆಯುತ್ತಿದ್ದವು. ಆದರೆ ಹರಿಲಾಲನ ಮನಸ್ಸಿನಲ್ಲಿ ಮತ್ತೆ ಅಧ್ಯಯನ ಮಾಡುವ ಗೀಳು ಗರಿಕೆದರಿತು. ಆ ದಿನಗಳಲ್ಲಿ ಕೆಲವು ವರ್ಷಗಳ ಹಿಂದೆ ಬಾಪೂ ಅವರ ಕಚೇರಿಯಲ್ಲಿ ಕೆಲಸ ಮಾಡುವ ಗುಮಾಸ್ತ ರಿಚ್ ಕೆಲಸವೊಂದರ ನಿಮಿತ್ತ ಬಾಪೂ ಅವರ ಕಚೇರಿಗೆ ಭೇಟಿ ಮಾಡಲು ಬಂದ. ಈಗ ಅವನು ಬ್ಯಾರಿಸ್ಟರ್ ಆಗಿದ್ದ. ಅವನನ್ನು ಭೇಟಿಯಾಗಿ ಹರಿಲಾಲ ಆಶ್ಚರ್ಯಗೊಂಡ. ರಿಚ್ ಮುಖದಲ್ಲಿ ದೊಡ್ಡಸ್ತಿಕೆ ಮತ್ತು ಸ್ವಾತಂತ್ರ್ಯತೆಯ ಭಾವನೆಯಿತ್ತು. ಕೆಲವೇ ವರ್ಷಗಳಲ್ಲಿ ರಿಚ್ ತುಂಬಾ ಬದಲಾಗಿದ್ದ. ಬಾಪು ಅವರ ಕಚೇರಿಯ ಮೂಲೆಯೊಂದರ ಟೇಬಲ್ ಬಳಿ ತಲೆ ತಗ್ಗಿಸಿ ದೈನ್ಯತೆಯಿಂದ ಕೆಲಸ ಮಾಡುತ್ತಿದ್ದ ರಿಚ್ ಈಗ ಬಾಪೂ ಅವರಿಗೆ ಸರಿಸಮನಾಗಿ ಒಂದೇ ಟೇಬಲ್ ಬಳಿ ಕೂತು ಚರ್ಚಿಸುತ್ತಿದ್ದ. ಅವನು ಹರಿಲಾಲನನ್ನು ನೋಡಿ ಹಳೆಯ ನೆನಪನ್ನು ಕೆದಕಿದ.

'ಅರೇ ಹರಿಲಾಲ' ರಿಚ್ ಹರಿಲಾಲನ ಕೈಯನ್ನು ಹಿಡಿದು ಕುಲುಕಿದ, 'ನೀನು ಮರಳಿ ಬಂದು ಒಳ್ಳೆಯದನ್ನು ಮಾಡಿದೆ. ಬಾಪೂ ಅವರ ಕಚೇರಿಯನ್ನು ನೋಡಿಕೊಳ್ಳಲು ಒಬ್ಬರ ಸಹಾಯ ಬೇಕೇ ಬೇಕು.'

ಹರಿಲಾಲನಿಗೆ ರಿಚ್‌ನ ಮಾತುಗಳು ಅರ್ಥವಾಗಲಿಲ್ಲ. ಈಗ ಅವನ ಆಂಗ್ಲ ಭಾಷೆ ಒಮ್ಮೆಲೆ ಯೂರೋಪಿಯನ್ನರಂತಾಗಿತ್ತು. ಹರಿಲಾಲ ಕಾರಣವಿಲ್ಲದೆಯೇ ನಾಚಿದ.

'ಮಿಸ್ಟರ್ ರಿಚ್, ನೀವು ತುಂಬಾ ಬದಲಾಗಿದ್ದೀರ.' ಹರಿಲಾಲ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ.

'ಹರಿಲಾಲ, ಇದಕ್ಕಾಗಿ ನಾನು ನಿಮ್ಮ ತಂದೆಯವರಿಗೆ ಕೃತಜ್ಞತೆಯನ್ನು ಸಲ್ಲಿಸಬೇಕು.' ರಿಚ್ ಬಾಪೂ ಅವರನ್ನು ನೋಡುತ್ತಾ ಹೇಳಿದ, 'ಬಾಪೂ ಅವರೇ ನನ್ನನ್ನು ವಿದೇಶಕ್ಕೆ ಹೋಗಿ ಬ್ಯಾರಿಸ್ಟರ್ ಆಗಲು ಪ್ರೇರೇಪಿಸಿದರು. ಬ್ಯಾರಿಸ್ಟರ್ ಆದ ನಂತರ ನಾನು ಬಾಪೂ ಅವರಂತೆಯೇ ದೇಶದ ಸೇವೆಯನ್ನು ಮಾಡಬಲ್ಲೆ. ಇಲ್ಲದಿದ್ದಲ್ಲಿ ಇಂದೂ ಸಹ ನಾನು ಸ್ವಯಂಸೇವಕನಾಗಿರಬೇಕಿತ್ತು.' ರಿಚ್ ಕಿಲಕಿಲನೆ ನಕ್ಕು ಕೇಳಿದ, 'ನೀನು...ಎಲ್ಲಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿದೆ, ಹರಿಲಾಲ? ಹಿಂದೂಸ್ತಾನದಲ್ಲಿ ಒಳ್ಳೆಯ ಡಿಗ್ರಿ ಸಿಕ್ಕಿರಬೇಕು?'

ಹರಿಲಾಲ ಮತ್ತೆ ನಾಚಿದ. ಅವನು ರಿಚ್ ಪ್ರಶ್ನೆಗೆ ಉತ್ತರಿಸುವುದಕ್ಕೆ ಪ್ರತಿಯಾಗಿ ಕೆಳಗಿನ ನೆಲವನ್ನು ನೋಡಿದ. ರಿಚ್ ಸಹ, ತನಗೆ ಯಾವುದೇ ಉತ್ತರದ ಅಗತ್ಯವಿಲ್ಲ ಎಂಬಂತೆ ವರ್ತಿಸಿದ. ನಂತರ ರಿಚ್ ಹೊರಟು ಹೋದ.

ಅಂದು ರಾತ್ರಿ ಹರಿಲಾಲ ತಂದೆಗೆ ಹೇಳಿದ

'ಬಾಪೂ. ಇಲ್ಲಿ ನನ್ನ ವಿದ್ಯಾಭ್ಯಾಸಕ್ಕೆ ವ್ಯವಸ್ಥೆಯೊಂದು ಆಗಬೇಕಿದೆ ಎಂದು ನನಗೆ ಅನ್ನಿಸುತ್ತದೆ. ನನ್ನ ವಿದ್ಯಾಭ್ಯಾಸ ಅರ್ಧಕ್ಕೇ ನಿಂತಿದೆ, ಆದರೆ ನನ್ನ ತಮ್ಮಂದಿರೂ ಸಹ ವಿದ್ಯಾಭ್ಯಾಸ ಮಾಡದೆ...'

'ಹರಿಲಾಲ, ಇದೇನು ಮಾತನಾಡುತ್ತಿದ್ದೀಯ?' ಬಾಪೂ ಅವರಿಗೆ ಆಶ್ಚರ್ಯವಾಯಿತು, 'ಇಲ್ಲಿಯ ಆಶ್ರಮದಲ್ಲಿ ಮತ್ತು ಹೋರಾಟದಲ್ಲಿ ನಮಗೆ ಸಿಗುತ್ತಿರುವ ಶಿಕ್ಷಣದ ಎದುರು ಬಿಳಿಯರ ಪಠ್ಯಪುಸ್ತಕದ ಓದಿಗೆ ಯಾವ ಬೆಲೆಯೂ ಇಲ್ಲ. ನೈತಿಕತೆ ಮತ್ತು ಸೇವೆಯ ಪಾಠ...'

'ಈ ಪಾಠವನ್ನು ನೀವು ಮಕ್ಕಳಿಗೆ ಖಂಡಿತ ಕಲಿಸಿ...' ಬಾ ಮಧ್ಯದಲ್ಲಿ ಬಾಯಿ ಹಾಕಿದರು, 'ಆದರೆ ನೈತಿಕತೆ ಅಥವಾ ಸೇವೆಯನ್ನು ಕಲಿಯಲು ಅವಿದ್ಯಾವಂತರನ್ನಾಗಿಡುವ ಅಗತ್ಯವಿಲ್ಲ.'

'ನಿನ್ನ ಮಗ ಅವಿದ್ಯಾವಂತನೆಂದು ಯಾರು ಹೇಳುತ್ತಾರೆ? ಇವನ ಬಳಿ ವಿಶ್ವವಿದ್ಯಾಲಯದ ಡಿಗ್ರಿ ಇಲ್ಲದಿರಬಹುದು, ಆದರೆ ಇವನಲ್ಲಿ ಮಾನವೀಯತೆಯ ವಿಕಾಸವಾಗುವುದು, ಅದೇ ಎಲ್ಲಕ್ಕಿಂತ ಅತ್ಯಮೂಲ್ಯವಾಗುವುದು.' ಬಾಪೂ ಸ್ಪಷ್ಟ ಪಡಿಸಿದರು. 'ಪೋಲಕ್ ಮತ್ತು ಕ್ಯಾಲನಬೈಕ್‌ರಂಥ ನಿಮ್ಮ ಅತ್ಯಂತ ಪ್ರೀತಿಯ ಮಿತ್ರರು ಸಹ ನಿಮಗೆ, ಈ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಕೊಡಿಸುವಂತೆ ಒತ್ತಾಯಿಸಿದ್ದನ್ನು ನೀವು ಮರೆತಿರ?' ಬಾ, ಬಾಪೂ ಅವರ ನೆನಪನ್ನು ಕೆದಕಿದರು, 'ಒಂದು ಬಿಡಿಗಾಸು ಅಥವಾ ಧೋತರವನ್ನು ಸಹ ನಿಮ್ಮ ಮಕ್ಕಳಿಗೆ ನೀವೆಂದೂ ಸಂಗ್ರಹಿಸಲಿಲ್ಲ....ಈಗ ಅವರ ವಿದ್ಯಾಭ್ಯಾಸದ ಬಗ್ಗೆಯೂ ಗಮನವನ್ನು ಕೊಡುತ್ತಿಲ್ಲ...ಇವರು ಭಿಕ್ಷುಕರಾಗದೆ ಇನ್ನೇನು ತಾನೇ ಆಗಲು ಸಾಧ್ಯ?'

'ನಿನ್ನ ಮನಸ್ಸಿನಲ್ಲಿ ಮೋಹ ಹುಟ್ಟುತ್ತಿದೆ. ಈ ಮೋಹವೇ ಮನುಷ್ಯನನ್ನು ಕೆಳಗೆ ತಳ್ಳುತ್ತದೆ' ಬಾಪೂ ಶಾಂತ ಚಿತ್ತದಿಂದ ಹೇಳಿದರು, 'ಮಕ್ಕಳಲ್ಲಿ ಸಾಮರ್ಥ್ಯವಿದ್ದರೆ ವಿಶ್ವವಿದ್ಯಾಲಯದ ಅರ್ಥವಿಲ್ಲದ ಡಿಗ್ರಿಯ ಅವಶ್ಯಕತೆ ಅವರಿಗಾಗದು. ಒಂದು ವೇಳೆ ಸಾಮಥ್ಯವಿರದಿದ್ದರೆ, ಏನೇ ವಿದ್ಯಾಭ್ಯಾಸವನ್ನು ಕೊಡಿಸಿದರೂ, ಅದರಿಂದ ಯಾವುದೇ ಸಹಾಯವಾಗುವುದಿಲ್ಲ...' 'ಅದೆಲ್ಲಾ ಸರಿ, ಆದರೂ ಬಾಪೂ!' ಮಣಿಲಾಲ ಮೊದಲ ಬಾರಿಗೆ ಈ ಚರ್ಚೆಯಲ್ಲಿ ತನ್ನ ಅಭಿಪ್ರಾಯವನ್ನು ಹೇಳಿದ, 'ದೇಶದಲ್ಲಿ ಮತ್ತು ಇಲ್ಲಿಯ ಕಚೇರಿಯಲ್ಲಿ ಎಲ್ಲರೂ, 'ಮಣಿಲಾಲ, ನೀನು ಯಾವ ತರಗತಿಯಲ್ಲಿ ಓದುತ್ತಿದ್ದೀಯ?' ಎಂದು ಕೇಳುತ್ತಾರೆ. ಆಗ ನನಗೆ ಉತ್ತರ ಹೊಳೆಯುವುದಿಲ್ಲ, ನನಗೆ